ಚುಟುಕು ಸುದ್ದಿ

ಸ್ಥಿರಾಸ್ತಿ ನೋಂದಣಿಗೆ ಇ-ಆಸ್ತಿ ಖಾತಾ ಕಡ್ಡಾಯ

ಉದಯಕಾಲ ನ್ಯೂಸ್

ದಾವಣಗೆರೆ: ಮಹಾನಗರಪಾಲಿಕೆ ವ್ಯಾಪ್ತಿ ಮತ್ತು ನಗರ ಸ್ಥಳೀಯ ಸಂಸ್ಥೆ ಸಿ.ಎಂ.ಸಿ, ಟಿ.ಎಂ.ಸಿ ಸ್ಥಿರಾಸ್ತಿಗಳ ನೋಂದಣಿಗೆ ಇ-ಆಸ್ತಿ ಖಾತಾವನ್ನು ಕಾವೇರಿ 2.0 ತಂತ್ರಾಂಶದಲ್ಲಿ ಸೆ. 23 ರಿಂದ ಸಂಯೋಜನೆಗೊಳಿಸಿಲು ಕಡ್ಡಾಯಮಾಡಿದ್ದು. ಸಾರ್ವಜನಿಕರು ತಮ್ಮ ಇ-ಸ್ವತ್ತಿಗೆ ಸಂಬಂಧಿಸಿದ ಇ-ಆಸ್ತಿ ಖಾತಾ ಹೊಂದಿರುವುದನ್ನು ಖಚಿತಪಡಿಸಿಕೊಂಡು. ನೋಂದಣಿ ವೇಳೆ ಇ-ಸ್ವತ್ತಿಗೆ ಸಂಬಂಧಿಸಿದ ಗುರುತಿನ ಮಾಹಿತಿಯನ್ನು ಇ-ಆಸ್ತಿ ತಂತ್ರಾಂಶದಿಂದ ಪಡೆದು ಕಾವೇರಿ-2 ರಲ್ಲಿ ನೋಂದಣಿ ಮಾಡಲಾಗುವುದು ಎಂದು ಹರಿಹರ ಉಪನೋಂದಣಾಧಿಕಾ ನಾಗರಾಜ್ ತಿಳಿಸಿದ್ದಾರೆ.

ಮೂರು ದಿನಗಳ ಕಮ್ಮಟಕ್ಕೆ ಅರ್ಜಿ ಆಹ್ವಾನ

ಉದಯಕಾಲ ನ್ಯೂಸ್

ದಾವಣಗೆರೆ: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೋಟಗೋಡಿ, ಹಾವೇರಿ ಜಿಲ್ಲೆ ಇವರ ಸಹಯೋಗದಲ್ಲಿ ಗಿರಿಜನ ಉಪಯೋಜನೆಯಡಿ ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಎಂಬ ಹೆಸರಿನಲ್ಲಿ 3 ದಿನಗಳ ಕಾಲ ಕಮ್ಮಟ ನಡೆಯಲಿದ್ದು, ಅಕ್ಟೋಬರ್ ಕೊನೆಯ ವಾರದಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೋಟಗೋಡಿ, ಹಾವೇರಿ ಜಿಲ್ಲೆಯಲ್ಲಿ ನಡೆಸಲು ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಪಂಗಡಕ್ಕೆ ಸೇರಿ 20 ರಿಂದ 45 ವರ್ಷ ವಯೋಮಾನದವರು ಅರ್ಜಿ ಸಲ್ಲಿಸಬಹುದು, ಅಕ್ಟೋಬರ್ 8 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ http://karnatakasahithyaacademy.org ಮೂಲಕ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ರಿಜಿಸ್ಟ್ರಾರ್ ಕರಿಯಪ್ಪ ಎನ್ ತಿಳಿಸಿದ್ದಾರೆ.

ಬಾಕ್ಸಿಂಗ್: ರಾಜ್ಯಮಟ್ಟಕ್ಕೆ ಆಯ್ಕೆ

ಉದಯಕಾಲ ನ್ಯೂಸ್

ತರೀಕೆರೆ: ಚಿಕ್ಕಮಗಳೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ತಾಲ್ಲೂಕಿನ ಗಂಟೆ ಕಣಿವೆಯ ಎ.ವಿ.ಎಸ್. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಬಾಕ್ಸಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದುಕೊಂಡು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈ ಕ್ರೀಡಾಪಟುಗಳಿಗೆ ಸಂಸ್ಥೆಯ ಮುಖ್ಯಸ್ಥ ಡಾ. ಎ. ವೀರಣ್ಣ ಸಜ್ಜನ್, ಕಾರ್ಯದರ್ಶಿ ದ್ರಾಕ್ಷಾಯಣಮ್ಮ, ಅಜೇಶ್ ವಿ.ಎಸ್., ಅರ್ಜುನ್ ವಿ.ಎಸ್., ದಿವ್ಯ ಎಚ್.ಆರ್. ಹಾಗೂ ಕಾಲೇಜಿನ ಪ್ರಾಂಶುಪಾಲ ವಿನೋದ್ ಲೋಕರೆ, ದೈಹಿಕ ಶಿಕ್ಷಕ ರವಿಶಂಕರ್ ಮತ್ತು ತರಬೇತಿದಾರ ಸೈಯದ್ ಅನ್ಸರ್ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಗೆಜ್ಜೆನಾದ ಕೃತಿ ಬಿಡುಗಡೆ | ವಿದ್ವಾಂಸ ಎ.ವಿ. ಸೂರ್ಯನಾರಾಯಣ ಸ್ವಾಮಿ ಅಭಿಮತ

ಕನ್ನಡ ಕಾವ್ಯಗಳ ಗೆಜ್ಜೆನಾದ ಅವಿಸ್ಮರಣೀಯ ಗ್ರಂಥ

ಉದಯಕಾಲ ನ್ಯೂಸ್

ತರೀಕೆರೆ: ಕನ್ನಡ ಸಾಹಿತ್ಯ ಪರಿಷತ್ತು, ತಾಲ್ಲೂಕು ಘಟಕ ಹಾಗೂ ಪ್ರಕೃತಿಶ್ರೀ ಕಲಾಕುಟೀರ, ಇವರ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಸಂಗೊಳ್ಳಿ ರಾಯಣ್ಣ ಬಡಾವಣೆಯಲ್ಲಿರುವ ಉಮಾ ಪ್ರಕಾಶ್ ಅವರ ಮನೆಯಂಗಳದಲ್ಲಿ ಪ್ರಚಲಿತ ವಿಷಯವನ್ನೊಳಗೊಂಡಂತೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ವಿಷಯದ ಬಗ್ಗೆ ಉಪನ್ಯಾಸ ನೀಡಲು ಮೈಸೂರಿನ ನಿವೃತ್ತ ಕನ್ನಡ ಪ್ರಾಧ್ಯಾಪಕ ಹಾಗೂ ವಿದ್ವಾಂಸ ಎ.ವಿ. ಸೂರ್ಯನಾರಾಯಣ ಸ್ವಾಮಿ, ಕನ್ನಡಶ್ರೀ ಭಗವಾನ್ ಮಾತನಾಡಿ, ಕನ್ನಡ ಕಾವ್ಯಗಳ ಗೆಜ್ಜೆನಾದ ಎಂಬುದು ಅವಿಸ್ಮರಣೀಯ ಗ್ರಂಥ. ಆದರಲ್ಲಿ ಎಲ್ಲಾ ತರಹದ ವಿಶೇಷ ಅಂಶವಿದೆ, ಆಟೋದವರು ತಮ್ಮ ಆಟೋಗಳ ಹಿಂದೆ ಬರೆದ ನುಡಿಮುತ್ತುಗಳ ಸಂಗ್ರಹ ಅದರಲ್ಲಿ ಇದೆ. ನಾವೆಲ್ಲಾ ಸೌಭಾಗ್ಯರು. ಆ ಕೃತಿಯ ಕರ್ತೃ ನಮ್ಮೊಂದಿಗೆ ಇಂದು ಬೆರೆತುಹೋಗಿದ್ದಾರೆ. ಎಲ್ಲಾ ವಿಚಾರಗಳ ಸಂಗ್ರಹ ಅದರಲ್ಲಿ ಇದೆ. ಹೊಸ ಹೊಸ ಪದಗಳ ಪ್ರಯೋಗ ಆ ಗ್ರಂಥದಲ್ಲಿದೆ ಎಂದು ಹೇಳುವ ಮೂಲಕ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಸಾಪ ತಾಲ್ಲೂಕು ಅಧ್ಯಕ್ಷ ರವಿ ದಳವಾಯಿ ಉದ್ಘಾಟನಾ ನುಡಿಗಳನ್ನಾಡುತ್ತಾ ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ ಇಡೀ ತಿಂಗಳು ಸಾಹಿತ್ಯ ಸಂಭ್ರಮ ಕಾರ್ಯಕ್ರಮವನ್ನು ಕಳೆದ ತಿಂಗಳಲ್ಲಿ ಮಾಡಿದ್ದು, ಸಮಾರೋಪ ಸಮಾರಂಭ ಉಮಾ ಪ್ರಕಾಶ್ ಅವರ ಮನೆಯಂಗಳದಲ್ಲಿ ನಡೆದದ್ದು ವಿಶೇಷವಾಗಿತ್ತು ಎಂದರು.

ನಮ್ಮ ತರೀಕೆರೆಯ ಪ್ರತಿಭೆ ಹಿರಿಯ ಕನ್ನಡ ವಿದ್ವಾಂಸರು ಎ.ವಿ. ಸೂರ್ಯನಾರಾಯಣ ಸ್ವಾಮಿಗಳು ಮೈಸೂರಿನಲ್ಲಿ ನೆಲೆಸಿದ್ದು, ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ನಮ್ಮ ನಾಡಿಗೆ ಹಲವಾರು ಕೊಡುಗೆ ನೀಡಿದ್ದಾರೆ. ಈ ನೆಲದ ಸೊಗಡನ್ನು ಪಸರಿಸುತ್ತಿದ್ದಾರೆ. ಸಾಹಿತ್ಯ, ಕಲೆ, ಸಾಂಸ್ಕೃತಿಕವಾಗಿ ಬೆಳಗುತ್ತಿದ್ದಾರೆ. ಇಂತಹ ಇಳಿ ವಯಸ್ಸಿನಲ್ಲಿಯೂ ಸಾಹಿತ್ಯವನ್ನು ಎಲ್ಲರೊಂದಿಗೆ ಸಂವಾದದ ಮುಖಾಂತರ ಬೇರೆಯವರ ಪ್ರತಿಭೆಯನ್ನು ಹೊರತರುವ ಕೆಲಸ ಮಾಡುತ್ತಿದ್ದಾರೆ, ಹಳ್ಳಿಯ ಸೊಗಡನ್ನು ದಾಖಲೆಯ ಸಹಿತ ಸಂಗ್ರಹ ಮಾಡಿದ್ದಾರೆ. ಗೆಜ್ಜೆನಾದ ಕೃತಿ ಎಲ್ಲರಿಗೂ ಪರಿಚಯಿಸಿ ಅದರಲ್ಲಿರುವ ಸಾಹಿತ್ಯ, ಜಾನಪದ ಸಂಸ್ಕೃತಿ ಇತರರಿಗೆ ತಿಳಿಯಬೇಕು ಎಂದರು.

ತರೀಕೆರೆಯಲ್ಲಿ ರಾಜ್ಯಮಟ್ಟದ ಪ್ರಪ್ರಥಮ ಜಾನಪದ ಸಮ್ಮೇಳನ ನಡೆದು ಹಲವು ವರ್ಷಗಳೇ ಕಳೆದಿವೆ. ಆ ಸಂರ್ಭದಲ್ಲಿ ಹೊನ್ನ ಬಿತ್ತೇವು ಹೊಲಕೆಲ್ಲ ಎಂಬ ಜಾನಪದ ಸಮಗ್ರ ಗ್ರಂಥವನ್ನು ಬಿಡುಗಡೆ ಮಾಡಲಾಗಿತ್ತು. ಆದೇ ರೀತಿಯ ಜಾನಪದ ಜಾತ್ರೆಯ ಸಂಭ್ರಮವನ್ನು ಮುಂದಿನ ದಿನಗಳಲ್ಲಿ ತರೀಕೆರೆಯ ನೆಲದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮಾಡುವ ಆಶಯವನ್ನು ವ್ಯಕ್ತಪಡಿಸಿದರು.

ಗೆಜ್ಜೆನಾದ ಕೃತಿ ಬಿಡುಗಡೆ ಮಾಡಿ ಜಿಲ್ಲಾ ಕಸಾಪ ಜಿಲ್ಲಾಧ್ಯಕ್ಷ ಸೂರಿ ಶ್ರೀನಿವಾಸ್ ಮಾತನಾಡುತ್ತಾ ಈ ನೆಲದ ವಿದ್ವಾಂಸರಿಂದ ಸಾಹಿತ್ಯ ಮತ್ತು ಕಲೆಗೆ ವಿಶೇಷ ಕೊಡುಗೆ ನೀಡಿದ್ದಾರೆ. ಪರಿಷತ್ತಿಗೆ ಅನರ್ಘ್ಯರತ್ನ ಎ.ವಿ. ಸೂರ್ಯನಾರಾಯಣ ಸ್ವಾಮಿ, ಈ ಇಳಿ ವಯಸ್ಸಿನಲ್ಲೂ ಇಂತಹ ಸಾಹಿತ್ಯ ಸಂವಾದ, ಚರ್ಚೆ, ವಿಷಯಾಧಾರಿತ ಚರ್ಚಾ ಕೂಟದಲ್ಲಿ ಭಾಗವಹಿಸುತ್ತಿರುವುದರಿಂದ ಯುವ ಮನಸುಗಳಿಗೆ ಸಾಹಿತ್ಯದ ಔತಣ ನೀಡುತ್ತಿರುವುದು ಒಂದು ವಿಶೇಷ. ಇವರು ತರೀಕೆರೆ ತಾಲ್ಲೂಕಿನ ಪ್ರಥಮ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿದ್ದರು. ಸುಮಾರು 18 ಸಾಹಿತ್ಯ ಸಮ್ಮೇಳನಗಳು ತರೀಕೆರೆಯಲ್ಲಿ ನಡೆದಿದ್ದು, ಸಾಹಿತ್ಯ ಸಾಂಸ್ಕೃತಿಕವಾಗಿ ಈ ನೆಲದ ಕೊಡುಗೆಯಾಗಿದ್ದು, ಅವರ ಅಮೃತ ನುಡಿಗಳು ಹಾಗೂ ನುಡಿದಂತೆ ನಡೆಯುವ ಗುಣವಾಗಿದೆ ಎಂದರು.

ಹಿರಿಯ ವಿದ್ವಾಂಸ ಹಾಗೂ ಸಾಹಿತಿ ಎ.ವಿ. ಸೂರ್ಯನಾರಾಯಣ ಸ್ವಾಮಿ ಮಾತನಾಡುತ್ತಾ ಕನ್ನಡಮಾತೆ, ಭಾರತಮಾತೆ, ವಿಶ್ವಮಾತೆ ಒಟ್ಟಿಗೆ ಪ್ರದರ್ಶನವಾಗುತ್ತಿದೆ. ಕಲ್ಲಿನ ಮೇಲೆ ಕುಳಿತು ಸರಸ್ವತಿ ವೀಣೆ ನುಡಿಸುತ್ತಿದ್ದು, ಮಳೆ ಜಪ ಮಾಡುತ್ತಿದ್ದಾಳೆ ಸಮೃದ್ಧಿಯ ಕರೆಯ ಜಪ ಮಾಡುತ್ತಿದೆ. ಈ ಭಾಗ್ಯ ಎಂದೆಂದಿಗೂ ನೆಲೆಸಲಿ. ಎಲ್ಲಾ ಕಾಲದಲ್ಲೂ ಒಳ್ಳೆಯದೂ ಇದೆ, ಕೆಟ್ಟದ್ದೂ ಇದೆ, ನಾವು ಹೇಗಿರುತ್ತೇವೆ ಎಂಬುದು ಮುಖ್ಯ ಎಂದರು.

ಎಲ್ಲಾ ಕವಿಗಳು ಎಲ್ಲಾ ತರಹದ ಕವಿತೆಗಳನ್ನು ರಚಿಸಿದ್ದಾರೆ. ನುಡಿಗಳಿಂದಲೇ ಎಲ್ಲಾ ಮಾಡಿದ್ದಾರೆ, ಕನ್ನಡ ಸಾಹಿತ್ಯ ಕೆಲಸಕ್ಕೆ ಯಾವುದೇ ತರಹದ ವಯಸ್ಸಿಲ್ಲ, ಹಾಗೆಯೇ ಸಂಗೀತಕ್ಕೂ ಯಾವುದೇ ವಯಸ್ಸಿಲ್ಲ, ಹೊಸದಾಗಿ ಕಲಿತು ಕೊನೆಯಾಗುವುದು ನಮ್ಮ ಆನಂದವಾಗಬೇಕು. ಸಂತೋಷ ಎಂಬುದು ಮನಸ್ಸಿಗೆ ಸಂಬಂಧಿಸಿದ್ದು, ಅದು ಸುತ್ತ - ಮುತ್ತ ಎಲ್ಲಾ ಕಡೆ ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಲೇಬೇಕು ಎಂದರು..

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಉಮಾಪ್ರಕಾಶ್ ಮಾತನಾಡುತ್ತ ಇಂತಹ ಪ್ರಾಜ್ಞರ ನುಡಿಮುತ್ತುಗಳನ್ನು ಕೇಳುವ ಸೌಭಾಗ್ಯ ಒದಗಿಸಿದಂತಹ ಸಾಹಿತ್ಯ ಪರಿಷತ್ತಿಗೆ ಧನ್ಯವಾದ ತಿಳಿಸಿದರು.

ಮಹಿಳಾ ಘಟಕದ ಅಧ್ಯಕ್ಷೆ ಸುನೀತಾ ಕಿರಣ್, ಲತಾ ಗೋಪಾಲಕೃಷ್ಣ, ಲಕ್ಷ್ಮೀ ಭಗವಾನ್, ಗಾಯತ್ರಿ ರವಿ, ತ.ಮ, ದೇವಾನಂದ, ಟಿ.ಆರ್. ಪ್ರಕಾಶ್, ಸಿ, ಯೋಗೀಶ್, ರುದ್ರಮ್ಮ, ಶೃತಿ ರವಿಕುಮಾರ್ ಭಾಗವಸಿದ್ದರು.

ಸ್ವಾಗತ ಮತ್ತು ನಿರೂಪಣೆಯನ್ನು ಇಮ್ರಾನ್ ಅಹಮದ್ ಬೇಗ್ ಹಾಗೂ ನವೀನ್ ಪೆನ್ನಯ್ಯ ವಂದಿಸಿದರು.

ಗಾಂಧೀಜಿಯವರ ಆಶಯದಂತೆ ನಾವೆಲ್ಲರೂ ಶಾಂತಿ ಪ್ರಿಯರಾಗೋಣ: ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ

ಉದಯಕಾಲ ನ್ಯೂಸ್

ದಾವಣಗೆರೆ: ಗಾಂಧೀಜಿಯವರ ಆಶಯದಂತೆ ಮಾನವೀಯತೆಗಾಗಿ ನಡೆ ಮೂಲಕ ನಾವೆಲ್ಲರೂ ಶಾಂತಿ ಪ್ರಿಯರಾಗೋಣ ಎಂದು ಜಿಲ್ಲಾಧಿಕಾರಿ ಹಾಗೂ ರೆಡ್ ಕ್ರಾಸ್ ಸೊಸೈಟಿಯ ಗೌರವಾಧ್ಯಕ್ಷರಾದ ಗಂಗಾಧರಸ್ವಾಮಿ ಜಿ.ಎಂ ಎಂದು ತಿಳಿಸಿದರು.

ಅವರು ಜಿಲ್ಲಾಡಳಿತ ಹಾಗೂ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ವಿಶ್ವ ಶಾಂತಿ ದಿನಾಚರಣೆ ಅಂಗವಾಗಿ ಶನಿವಾರ ಸೆಪ್ಟಂಬರ್ 21 ರಂದು ಹಮ್ಮಿಕೊಳ್ಳಲಾಗಿದ್ದ. ಮಾನವೀಯತೆಗಾಗಿ ನಡೆದ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು. ಗಾಂಧೀಜಿಯವರನ್ನು ಇಂದಿನ ದಿನಮಾನಗಳಲ್ಲಿ ಮತ್ತು ಮುಂದಿನ ದಿನಮಾನಗಳಲ್ಲಿ ಯಾಕೆ ಅವರು ಜೀವಂತವಾಗಿದ್ದಾರೆ ಎಂಬುದಕ್ಕೆ, ಇವತ್ತು ನಾವೆಲ್ಲರೂ ಸೇರಿ ಮಾಡುತ್ತಿರುವ ಶಾಂತಿ ನಡೆಯೇ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಈ ದಿನ ರಾಜ್ಯದ 31 ಜಿಲ್ಲೆಯಲ್ಲೂ ವಿಶ್ವ ಶಾಂತಿ ದಿನಾಚರಣೆ ಪ್ರಯುಕ್ತ ಮಾನ ವೀಯತೆಗಾಗಿ ನಡಿಗೆ ಜಾಥ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಜಾಥಾದಲ್ಲಿ ಅಶಾಂತಿ ತೊಲಗಿ ಶಾಂತಿ ನೆಲೆಸಲಿ, ರ?ಾ?ಯ ಉಕ್ರೇನ್ ಯುದ್ಧ ನಿಲ್ಲಲಿ, ಬಾಂಗ್ಲಾದೇಶದಲ್ಲಿ ಶಾಂತಿ ನೆಲೆಸಲಿ, ಇಸ್ರೇಲ್ ಪ್ಯಾಲೆಸ್ಟೈನ್ ಯುದ್ಧ ನಿಲ್ಲಲಿ, ಮಾನವೀಯತೆಯಿಂದ ಮಾತ್ರ ವಿಶ್ವ ಶಾಂತಿ ಸಾಧ್ಯ ಎಂಬ ಘೋಷವಾಕ್ಯದೊಂದಿಗೆ ಜಾಥಾ ಸಾಗಿತು.

ಜಾಥಾವು ಮೋತಿ ವೀರಪ್ಪ ಕಾಲೇಜ್‌ನಿಂದ ಆರಂಭಗೊಂಡು ಬಾಯ್ಸ್ ಹಾಸ್ಟೆಲ್, ಹಾಗೂ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನ ಮುಂಭಾಗದ ರಸ್ತೆಯಿಂದ ಸಾಗಿ ಮೋತಿ ವೀರಪ್ಪ ಕಾಲೇಜ್ ಆವರಣಕ್ಕೆ ಬಂದು ಕೊನೆಯಾಯಿತು.

ಜಾಥಾದಲ್ಲಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ದಿನೇಶ್ ಕೆ. ಶೆಟ್ಟಿ, ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿಯಾದ ಎಂ.ವಿ ಶಿವಕುಮಾರ್ ಹಾಗೂ ಕುಂದುವಾಡ ವಾಯುವಿಹಾರಿಗಳ ಬಳಗ, ಅಸಂಘಟಿತ ಕಾರ್ಮಿಕರ ಸಂಘ, ವಿ.ಎಸ್ ಪ್ಯಾರಾಮೆಡಿಕಲ್ ಕಾಲೇಜ್, ಎಂ.ಎಸ್.ವಿ ಕಾಲೇಜ್, ಮಾಕನೂರು ಮಲ್ಲೇಶಪ್ಪ ಕಾಲೇಜ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಡಿ.ಆರ್.ಎಂ ಕಾಲೇಜ್, ಜೈನ್ ಇಂಜಿನಿಯರಿಂಗ್ ಕಾಲೇಜ್, ಸಿದ್ದಗಂಗಾ ಕಾಲೇಜ್, ಎಸ್.ಜೆ.ವಿ.ಪಿ ಕಾಲೇಜ್, ಎಂ.ಇ.ಎಸ್ ಕಾಲೇಜಿನ ವಿದ್ಯಾರ್ಥಿಗಳು, ರೆಡ್ ಕ್ರಾಸ್ ಸಂಸ್ಥೆಯ ಸಿಬ್ಬಂದಿಗಳು ಹಾಗೂ ಇನ್ನಿತರರು ಭಾಗವಹಿಸಿದ್ದರು.

ICICI Home Finance
ಕಾರ್ಪೊರೇಟ್ ಕಚೇರಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ ಅಂಧೇರಿ (ಪೂರ್ವ), ಮುಂಬಯಿ-400059, ಭಾರತ.
ಶಾಖಾ ಕಚೇರಿ : 1ನೇ ಮಹಡಿ, ಕಚೇರಿ ಸಂ. 361/2-361/2-1232, ಜಯಚಂದ್ರ ಕಟ್ಟಡ, ಪಿಪಿ ಆವರಣ, 4ನೇ ಕ್ರಾಸ್, ಪಾರ್ಕ್ ಎಕ್ಸ್‌ಟೆನ್ಷನ್ ದುರ್ಗಿಗುಡಿ, ಶಿವಮೊಗ್ಗ-577201.

[ಪ್ರೊವಿಸೊ ನಿಯಮ 8(6) ನ್ನು ನೋಡಿ] ಸ್ಥಿರ ಆಸ್ತಿಗಳ ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002, ನಿಯಮ 8(8) ನ್ನು ಓದಿಕೊಂಡಂತೆ ನಿಯಮ 9(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ಅಡಿ ಇ-ಹರಾಜು ಮೂಲಕ ಸ್ಥಿರಾಸ್ತಿಗಳ ಮಾರಾಟಕ್ಕೆ ಮಾರಾಟ ಸೂಚನೆ.

ಈ ಮೂಲಕ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಸೂಚನೆ ನೀಡುವುದೇನೆಂದರೆ, ಈ ಕೆಳಗೆ ಹೆಸರಿಸಿರುವ ಆಸ್ತಿಯನ್ನು ಸುರಕ್ಷಿತ ಭದ್ರತಾದಾರರಿಗೆ ಅಡಮಾನ/ಚಾರ್ಜ್ ಮಾಡಿದ್ದು, ಅದನ್ನು ಅಧಿಕೃತ ಅಧಿಕಾರಿ, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., ಅವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಅದನ್ನು ಅವರು "ಎಲ್ಲಿ ಏನಿದೆಯೋ ಹಾಗೆ", ಎಲ್ಲಿ ಹೇಗಿದೆಯೋ ಹಾಗೆ", "ಯಾವುದು ಹೇಗಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ವಿವರಿಸಿದಂತೆ ಮಾರಾಟ ಮಾಡಲಿರುವರು.

ಕ್ರ ಸಂ	ಸಾಲಗಾರರ/ಸಹ-ಸಾಲಗಾರರ ಜಾಮೀನುದಾರರ/ಕಾನೂನುರೀತ್ಯಾ ಉತ್ತರಾಧಿಕಾರಿ ಹೆಸರು/ ಸಾಲದ ಖಾತಾ ಸಂ.	ಭದ್ರತಾ ಆಸ್ತಿ ವಿವರ ಜೊತೆಗೆ ಯಾವುದಾದರೂ ಪರಭಾರೆ ಇದ್ದಲ್ಲಿ ಅದರ ವಿವರ	ಬಾಕಿ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಠೇವಣಿ ಹಣ	ಆಸ್ತಿ ಪರಿವೀಕ್ಷಣೆ ದಿನಾಂಕ & ಸಮಯ	ಹರಾಜಿನ ದಿನಾಂಕ & ಸಮಯ	ಹರಾಜು ದಿನಾಂಕದ ಒಂದು ದಿನ ಮೊದಲು	ಸ್ವಾಧೀನ ಹಂತ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)	(ಹೆಚ್)	(ಐ)
1.	ಮೊಹಮ್ಮದ್ ಆಲಿ ಪಿ (ಸಾಲಗಾರ) ರೇಷ್ಮಾ (ಸಹ-ಸಾಲಗಾರ) ಕೆ ಅಬ್ದುಲ್ ರಹಿಮಾನ್ (ಸಹ-ಸಾಲಗಾರ) ಸಾಲದ ಖಾತಾ ಸಂ. LHMNG00001349773	ಸರ್ವೆ ಸಂ. 167/1ಸಿ1ಎ(ಪಿ3), ಸರ್ವೆ ಸಂ.167/ 1ಎ1ಸಿ3 (ಪಿ11), 168/3ಡಿ1(ಪಿ1) ಭಾಗ ಡಿ. ಸಂ. 4-1165 ರಿಂದ 4-1170 ಮತ್ತು 4-1172, ಪುತ್ತೂರು ಗ್ರಾಮ, ಕಸಬಾ ಗ್ರಾಮ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ನಗರ ಪುತ್ತೂರು-574201.	ರೂ. 16,09,119/- ಸೆಪ್ಟಂಬರ್ 10, 2024	ರೂ. 28,40,451/- ರೂ. 2,84,045/-	ಅಕ್ಟೋಬರ್ 04, 2024 11:00ಎಎಂ 03:00ಪಿಎಂ	ಅಕ್ಟೋಬರ್ 10, 2024 02:00ಪಿಎಂ 03:00ಪಿಎಂ	ಅಕ್ಟೋಬರ್ 09, 2024 ಸಂಜೆ 05:00 ಗಂಟೆ ಮೊದಲು	ಭೌತಿಕ ಸ್ವಾಧೀನ
2.	ಅಬ್ದುಲ್ ಅಜೀಜ್ (ಸಾಲಗಾರ) ನಸೀಮಾ (ಸಹ-ಸಾಲಗಾರ) ಸಾಲದ ಖಾತಾ ಸಂ. LHMNG00001338255 & LHMNG00001338538 & LHMNG00001338543	ವಾಸಯೋಗ್ಯ ಅಪಾರ್ಟ್‌ಮೆಂಟ್ ಸಂ. ಜಿ5, ಡೋರ್ ಸಂ. 2/45ಬಿ (5ಎ), ನೆಲಮಹಡಿ, ಏಶಿಯನ್ ಹೋಮ್ಸ್ ಎಸ್ ಸಂ. 36/1ಬಿ2(ಪಿ) ಸೋಮೇಶ್ವರ ಗ್ರಾಮ, ಮಂಗಳೂರು ತಾಲೂಕು, ದಕ್ಷಿಣ ಕನ್ನಡ, ಕರ್ನಾಟಕ.	ರೂ. 27,02,336/- ಸೆಪ್ಟಂಬರ್ 10, 2024	ರೂ. 28,83,600/- ರೂ. 2,88,360/-	ಅಕ್ಟೋಬರ್ 04, 2024 11:00ಎಎಂ 03:00ಪಿಎಂ	ಅಕ್ಟೋಬರ್ 10, 2024 02:00ಪಿಎಂ 03:00ಪಿಎಂ	ಅಕ್ಟೋಬರ್ 09, 2024 ಸಂಜೆ 05:00 ಗಂಟೆ ಮೊದಲು	ಭೌತಿಕ ಸ್ವಾಧೀನ

ಆನ್‌ಲೈನ್ ಹರಾಜನ್ನು ವೆಬ್‌ಸೈಟ್ (ಯುಆರ್‌ಎಲ್ ಲಿಂಕ್ eauctions.samil.in) ರಲ್ಲಿ ನಮ್ಮ ಹರಾಜು ಏಜೆನ್ಸಿ ಶ್ರೀರಾಮ್ ಆಟೋಮಾಲ್ ಇಂಡಿಯ ಲಿ. ಮೂಲಕ ನಡೆಸಲಾಗುವುದು. ಅಡಮಾನದಾರರಿಗೆ ಕೊನೆಯ ಅವಕಾಶವಾಗಿ ನೋಟೀಸ್ ನೀಡಲಾಗಿದ್ದು, ಒಟ್ಟು ಬಾಕಿಯನ್ನು ಅಕ್ಟೋಬರ್ 09, 2024 ರಂದು ಸಂಜೆ 5.00 ಗಂಟೆಯ ಒಳಗಾಗಿ ಪಾವತಿಸತಕ್ಕದ್ದು ಇಲ್ಲವಾದಲ್ಲಿ ಈ ಮೇಲೆ ವಿವರಿಸಿದ ಸ್ವತ್ತುಗಳನ್ನು ಮಾರಾಟ ಮಾಡಲಾಗುವುದು.

ಉದ್ದೇಶಿತ ಬಿಡ್ಡುದಾರ(ರು) ಅರ್ನೆಸ್ಟ್ ಠೇವಣಿ ಹಣವನ್ನು (ಇಎಂಡಿ) ಕಡ್ಡಾಯವಾಗಿ ಆರ್‌ಟಿಜಿಎಸ್/ಡಿಮ್ಯಾಂಡ್ ಡ್ರಾಫ್ಟ್ (ಡಿಡಿ)/(ಅಂಕಣ ಇ ಯನ್ನು ಆಧಾರ ಮಾಡಿಕೊಳ್ಳಿ) ನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಇಲ್ಲಿಗೆ ಈ ಮೇಲೆ ತಿಳಿಸಿದ ವಿಳಾಸಕ್ಕೆ ಅಕ್ಟೋಬರ್ 09, 2024 ರಂದು ಸಂಜೆ 04.00ಗಂಟೆಯ ಒಳಗಾಗಿ ಕಳುಹಿಸತಕ್ಕದ್ದು. ಉದ್ದೇಶಿತ ಬಿಡ್ಡುದಾರ(ರು) ನೋಂದಣಿ ನಮೂನೆಯ ಸಹಿ ಮಾಡಿದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು ಮತ್ತು ಬಿಡ್‌ನ ನಿಯಮ ಮತ್ತು ನಿಬಂಧನೆಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಈ ಮೇಲೆ ಹೆಸರಿಸಿದ ಶಾಖೆಗೆ ಅಕ್ಟೋಬರ್ 09, 2024 ರಂದು ಸಂಜೆ 5.00ಗಂಟೆಯ ಒಳಗಾಗಿ ಕಳುಹಿಸತಕ್ಕದ್ದು. ಅರ್ನೆಸ್ಟ್ ಠೇವಣಿ ಹಣ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಯನ್ನು ರಾಷ್ಟ್ರೀಕೃತ / ಷೆಡ್ಯೂಲ್ಡ್ ಬ್ಯಾಂಕ್ ನಿಂದ "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ.-ಹರಾಜು" ಪರವಾಗಿ ವಿಜಯವಾಡ ಇಲ್ಲಿ ಪಾವತಿಯಾಗುವಂತೆ ಪಡೆಯಬೇಕು.

ಆಸ್ತಿ ಪರಿವೀಕ್ಷಣೆ ಸಂಬಂಧ ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ, ಮಾರಾಟದ ನಿಯಮ ಮತ್ತು ನಿಬಂಧನೆಗಳು ಅಥವಾ ಬಿಡ್ ಸಲ್ಲಿಕೆ ಇತ್ಯಾದಿಗಳಿಗೆ ದಯವಿಟ್ಟು ಸಂಪರ್ಕಿಸಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಮೊ.ಸಂ. 9920807300. ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಬಿಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ಭೇಟಿ ನೀಡಿ : https://www.icicihfc.com

ದಿನಾಂಕ : ಸೆಪ್ಟಂಬರ್ 22.2024, ಸ್ಥಳ: ಪುತ್ತೂರು, ದಕ್ಷಿಣ ಕನ್ನಡ
ಅಧಿಕೃತ ಅಧಿಕಾರಿ, "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್"
ಸಿಐಎನ್ ಸಂಖ್ಯೆ : ಯು65922ಎಂಹೆಚ್1999ಪಿಎಲ್‌ಸಿ120106.

ನಿರ್ಮಾಣ ಹಂತದಲ್ಲಿನ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಕಾಮಗಾರಿ ಪ್ರಗತಿ ಪರಿಶೀಲಿಸಿದ ಶಾಸಕ ಶಿವಗಂಗಾ

ಉದಯಕಾಲ ನ್ಯೂಸ್

ಚನ್ನಗಿರಿ: ಚಿಕ್ಕ ಮಾಡಾಳು ಬಳಿ ನಿರ್ಮಾಣವಾಗುತ್ತಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿಯುತ ಶಾಲೆ ಕಟ್ಟಡದ ಪ್ರಗತಿಯನ್ನು ಶಾಸಕರಾದ ಬಸವರಾಜು ವಿ ಶಿವಗಂಗಾ ಪರಿಶೀಲನೆ ಮಾಡಿದರು. ಶಾಲಾ ಕಟ್ಟಡ ಮುಕ್ತಾಯ ಹಂತಕ್ಕೆ ಬಂದಿದ್ದು ಅಧಿಕಾರಿಗಳೊಂದಿಗೆ ಭೇಟಿ ನೀಡಿದ ಶಾಸಕರು ಕೂಡಲೇ ಕಟ್ಟಡ ಕಾಮಗಾರಿ ಪೂರ್ಣಕ್ಕೆ ಸೂಚಿಸಿದರು. ಕಟ್ಟಡ ನಿರ್ಮಾಣ ಹಿನ್ನೆಲೆ ಚನ್ನಗಿರಿ ಪಟ್ಟಣದಲ್ಲಿ ಸದ್ಯ ಶಾಲೆ ನಡೆಯುತ್ತಿದೆ, ಇದೀಗ ಹೊಸ ಕಟ್ಟಡ ಕಾಮಗಾರಿ ಪೂರ್ಣಗೊಂಡ ಬಳಿಕ ನೂತನ ಶಾಲಾ ಕಟ್ಟಡಕ್ಕೆ ಸ್ಥಳಾಂತರ ಮಾಡುವುದಾಗಿ ಶಾಸಕರು ತಿಳಿಸಿದರು. ಕಟ್ಟಡ ನಿರ್ಮಾಣ ಗುಣಮಟ್ಟದಿಂದ ಇರುಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡದರು. ಇಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆ ಉಂಟಾಗದಂತೆ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಬೇಕೆಂದು ತಿಳಿಸಿದರು.

ವಸತಿ ಯುತ ಶಾಲೆಯಾದ ಹಿನ್ನೆಲೆ ಬಡ ಮಕ್ಕಳಿಗೆ ಅನುಕೂಲವಾಗಲಿದೆ ಎಂದರು. ವಸತಿ ಶಾಲೆಗೆ ದಾಖಲಾಗಲು ಪ್ರತಿವರ್ಷ ಹೆಚ್ಚು ಬೇಡಿಕೆ ಇದೇ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಇದಕ್ಕೆ ಕಾರಣ ಉಚಿತವಾಗಿ ವಸತಿಯೊಂದಿಗೆ ಉತ್ತಮ ಶಿಕ್ಷಣ ಕಲ್ಪಿಸುತ್ತಿರುವುದು ಎಂದರು. ನಮ್ಮ ತಾಲ್ಲೂಕಿನ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಕಲ್ಪಿಸಲು ಬದ್ಧವಾಗಿದ್ದು ಶೀಘ್ರದಲ್ಲೇ ಈ ಶಾಲೆ ಉದ್ಘಾಟನೆ ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲಮಾಡಿಕೊಡುತ್ತೇವೆ ಎಂದರು. ಈ ವೇಳೆ ಇಂಜಿನಿಯರ್ ಗಳು, ಪ್ರಾಚಾರ್ಯರಾದ ಪ್ರಕಾಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಸೇರಿದಂತೆ ತಾಲ್ಲೂಕಿನ ಮುಖಂಡರುಗಳು ಉಪಸ್ಥಿತರಿದ್ದರು.

ತರೀಕೆರೆ ಪುರಸಭೆಯಿಂದ ಪಟ್ಟಣದ ತುದೀಪೇಟೆ ವಾಸಿ ಶ್ವೇತಾ ಎಂಬುವರಿಗೆ ತ್ರಿಚಕ್ರ ವಾಹನವನ್ನು ಮುಖ್ಯಾಧಿಕಾರಿ ಹೆಚ್. ಪ್ರಶಾಂತ್ ವಿತರಿಸಿದರು. ಈ ಸಂದರ್ಭದಲ್ಲಿ ಪುರಸಭಾ ಸದಸ್ಯೆ ಯಶೋದಮ್ಮ ಹನುಮಂತಪ್ಪ, ನವಶಕ್ತಿ ಯುವಕ ಸಂಘದ ಅಧ್ಯಕ್ಷ ಟಿ.ಎನ್. ಪಾಂಡುರಂಗ ಇದ್ದಾರೆ.

ಚಳ್ಳಕೆರೆ ಅಪರ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ.

ಸಿ.ಆರ್.ಮಿಸ್. ನಂ. 633/2024

ಅರ್ಜಿದಾರರು : 1) ಎಸ್.ಪಿ.ಮಂಜುನಾಥ ಬಿನ್ ಲೇಟ್ ಸಣ್ಣಬೋರಯ್ಯ, ಸು. 32 ವರ್ಷ, 2) ತಿಪ್ಪೇಸ್ವಾಮಿ ಬಿನ್ ಲೇಟ್ ಸಣ್ಣಬೋರಯ್ಯ ಸು.30 ವರ್ಷ, ವ್ಯವಸಾಯ ಚನ್ನಬಸಯ್ಯನಹಟ್ಟಿ ಗ್ರಾಮ, ನಾಯಕನಹಟ್ಟಿ ಪಟ್ಟಣ & ಹೋ. ಚಳ್ಳಕೆರೆ ತಾ. ಚಿತ್ರದುರ್ಗ ಜಿ.

ವಿರುದ್ಧ

ಎದುರುದಾರರು : ಮುಖ್ಯಾಧಿಕಾರಿಗಳು, ಜನನ ಮರಣ ನೋಂದಣಾಧಿಕಾರಿಗಳವರು, ಪಟ್ಟಣಪಂಚಾಯಿತಿ, ನಾಯಕನಹಟ್ಟಿ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನಸನ್ನಿಧಿಯ ನ್ಯಾಯಾಲಯದಲ್ಲಿ **ಅರ್ಜಿದಾರರ ತಾಯಿಯಾದ ಮೃತ ಪಾಲಮ್ಮ ಕೋಂ ಲೇಟ್ ಸಣ್ಣಬೋರಯ್ಯ ಇವರು ದಿನಾಂಕ 05-12-2018 ರಂದು ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಹೋ. ಚನ್ನಬಸಯ್ಯನಹಟ್ಟಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ** ಇವರು, ಮರಣ ಹೊಂದಿದ ಬಗ್ಗೆ ಮರಣದ ಸಮರ್ಥನಾ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರನ್ನು ಹೊರತುಪಡಿಸಿ ಇನ್ನು ಯಾರೇ ಅಗಲಿ ಮೃತರ ವಾರಸುದಾರರು ಇದ್ದಲ್ಲಿ **ದಿ : 07-10-2024** ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕವಾಗಲಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಗೈರು ಹಾಜರಾದಲ್ಲಿ ಏಕಪಕ್ಷೀಯವಾಗಿ ಈ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ 03-09-2024

ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ
ದಿನಾಂಕ : 03-09-2024 ಸಹಿ.
ಸ್ಥಳ : ಚಳ್ಳಕೆರೆ.
ಸಹಿ.
ಬಿ.ಪಾಲಯ್ಯ
ಅರ್ಜಿದಾರರ ಪರ ವಕೀಲರು, ಚಳ್ಳಕೆರೆ.
ಶಿರಸ್ತೆದಾರರು, ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಚಳ್ಳಕೆರೆ.

ಚಳ್ಳಕೆರೆ ಅಪರ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ.

ಸಿ.ಆರ್.ಮಿಸ್. ನಂ. 804/2024

ಅರ್ಜಿದಾರರು : 1) ಈರಮ್ಮ ಬಿನ್ ಲೇಟ್ ಅಜ್ಜಪ್ಪ ಕೋಂ ಕರಿಯಣ್ಣ ಸು. 62 ವರ್ಷ, 2) ಶಾಂತಮ್ಮ ಬಿನ್ ಲೇಟ್ ಅಜ್ಜಪ್ಪ ಕೋಂ ನಿಂಗಪ್ಪ, ಸು. 58 ವರ್ಷ, ಅರ್ಜಿದಾರ 1,2ರ ವಾಸ, ಬಸಪ್ಪನಮಾಳಿಗೆ ಗ್ರಾಮ, ಐಮಂಗಲ ಹೋ. ಹಿರಿಯೂರು ತಾ. ಚಿತ್ರದುರ್ಗ ಜಿ. 3) ಸಿರಿಯಮ್ಮ ಬಿನ್ ಲೇಟ್ ಅಜ್ಜಪ್ಪ ಕೋಂ ಗಾದಿರಪ್ಪ, ಸು. 55 ವರ್ಷ, 4) ಉಮಾದೇವಿ ಬಿನ್ ಲೇಟ್ ಅಜ್ಜಪ್ಪ ಕೋಂ ದೊಡ್ಡನಾಗಪ್ಪ, ಸು. 52 ವರ್ಷ, ಅರ್ಜಿದಾರ 3-4ರ ವಾಸ ಹುಲಿಕುಂಟೆ ಗೊಲ್ಲರಹಟ್ಟಿ ಪರಶುರಾಂಪುರ ಹೋ. ಚಳ್ಳಕೆರೆ ತಾ. ಚಿತ್ರದುರ್ಗ ಜಿ.

ವಿರುದ್ಧ

ಎದುರುದಾರರು : ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳವರು, ತಾಲ್ಲೂಕು ಕಛೇರಿ, ಚಳ್ಳಕೆರೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನಸನ್ನಿಧಿಯ ನ್ಯಾಯಾಲಯದಲ್ಲಿ **1 ರಿಂದ 4 ನೇ ಅರ್ಜಿದಾರರ ತಂದೆಯಾದ ಮೃತ ಅಜ್ಜಪ್ಪ ಬಿನ್ ಲೇಟ್ ಸಿರಿಯಪ್ಪ ಇವರು ದಿನಾಂಕ 05-06-2004 ರಂದು ಚಳ್ಳಕೆರೆ ತಾಲ್ಲೂಕು ಪರಶುರಾಂಪುರ ಹೋ. ಹುಲಿಕುಂಟೆ ಗೊಲ್ಲರಹಟ್ಟಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ** ಇವರು, ಮರಣ ಹೊಂದಿದ ಬಗ್ಗೆ ಮರಣದ ಸಮರ್ಥನಾ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರನ್ನು ಹೊರತುಪಡಿಸಿ ಇನ್ನು ಯಾರೇ ಅಗಲಿ ಮೃತರ ವಾರಸುದಾರರು ಇದ್ದಲ್ಲಿ **ದಿ : 01-10-2024** ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕವಾಗಲಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಗೈರು ಹಾಜರಾದಲ್ಲಿ ಏಕಪಕ್ಷೀಯವಾಗಿ ಈ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ 23-8-2024

ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ
ದಿನಾಂಕ : 23-08-2024 ಸಹಿ.
ಸ್ಥಳ : ಚಳ್ಳಕೆರೆ.
ಸಹಿ.
ಹೆಚ್.ನಾಗರಾಜ
ಅರ್ಜಿದಾರರ ಪರ ವಕೀಲರು, ಚಳ್ಳಕೆರೆ.
ಶಿರಸ್ತೆದಾರರು, ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಚಳ್ಳಕೆರೆ.

ಚಳ್ಳಕೆರೆ ಪ್ರಧಾನ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ.

ಸಿ.ಆರ್.ಮಿಸ್. ನಂ. 770/2024

ಅರ್ಜಿದಾರರು : 1) ಚಂದ್ರಣ್ಣ ಬಿನ್ ಲೇಟ್ ತಮ್ಮಪ್ಪ, ಸು. 60 ವರ್ಷ, 2) ಯಲ್ಲಮ್ಮ ಬಿನ್ ಲೇಟ್ ತಮ್ಮಪ್ಪ ಕೋಂ ನಿಂಗಪ್ಪ, ಸು. 62 ವರ್ಷ, 3) ಲಕ್ಷ್ಮಿದೇವಿ ಕೋಂ ಲೇಟ್ ಬಸವರಾಜ, ಸು. 60 ವರ್ಷ, ಅರ್ಜಿದಾರರೆಲ್ಲರೂ ವ್ಯವಸಾಯ, ವಾಸ ವಡೇರಹಳ್ಳಿ ಗ್ರಾಮ, ಕಸಬಾ ಹೋ. ಚಳ್ಳಕೆರೆ ತಾ. ಚಿತ್ರದುರ್ಗ ಜಿ.

ವಿರುದ್ಧ

ಎದುರುದಾರರು : ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳವರು, ತಾಲ್ಲೂಕು ಕಛೇರಿ, ಚಳ್ಳಕೆರೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನಸನ್ನಿಧಿಯ ನ್ಯಾಯಾಲಯದಲ್ಲಿ **1 ಮತ್ತು 2 ನೇ ಅರ್ಜಿದಾರರ ತಾಯಿಯಾದ 3ನೇ ಅರ್ಜಿದಾರರ ಅತ್ತೆಯಾದ, ಮೃತ ನಿಂಗಮ್ಮ ಕೋಂ ಲೇಟ್ ತಮ್ಮಪ್ಪ ಇವರು ದಿನಾಂಕ 23-07-2021 ರಂದು ಚಳ್ಳಕೆರೆ ತಾಲ್ಲೂಕು ಕಸಬಾ ಹೋ. ವಡೇರಹಳ್ಳಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ** ಇವರು, ಮರಣ ಹೊಂದಿದ ಬಗ್ಗೆ ಮರಣದ ಸಮರ್ಥನಾ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರನ್ನು ಹೊರತುಪಡಿಸಿ ಇನ್ನು ಯಾರೇ ಅಗಲಿ ಮೃತರ ವಾರಸುದಾರರು ಇದ್ದಲ್ಲಿ **ದಿ : 26-09-2024** ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕವಾಗಲಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಗೈರು ಹಾಜರಾದಲ್ಲಿ ಏಕಪಕ್ಷೀಯವಾಗಿ ಈ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ 12-8-2024

ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ
ದಿನಾಂಕ : 12-08-2024 ಸಹಿ.
ಸ್ಥಳ : ಚಳ್ಳಕೆರೆ.
ಸಹಿ.
ಹೆಚ್.ನಾಗರಾಜ
ಅರ್ಜಿದಾರರ ಪರ ವಕೀಲರು, ಚಳ್ಳಕೆರೆ.
ಶಿರಸ್ತೆದಾರರು, ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಚಳ್ಳಕೆರೆ.

ಚಳ್ಳಕೆರೆ ಪ್ರಧಾನ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ.

ಸಿ.ಆರ್.ಮಿಸ್. ನಂ. 867/2024

ಅರ್ಜಿದಾರರು : 1) ಮಾನಸ ಎನ್. ಬಿನ್ ಲೇಟ್ ನಾಗಭೂಷಣ್, ಸು. 26 ವರ್ಷ, 2) ಸಂಧ್ಯ ಬಿನ್ ಲೇಟ್ ನಾಗಭೂಷಣ್, ಸು. 28 ವರ್ಷ, 3) ಕೀರ್ತಿ ಎನ್. ಬಿನ್ ಲೇಟ್ ನಾಗಭೂಷಣ್, ಸು. 24 ವರ್ಷ, 4) ರಮ್ಯ ಎನ್. ಬಿನ್ ಲೇಟ್ ನಾಗಭೂಷಣ್, ಸು. 22 ವರ್ಷ, 5) ಗಂಗಮ್ಮ ಕೋಂ ಲೇಟ್ ಗುರುಸಿದ್ದಪ್ಪ ಸು. 72 ವರ್ಷ, ಅರ್ಜಿದಾರರ ವಾಸ ಚಳ್ಳಕೆರೆ ಟೌನ್ ಸೂಜಿಮಲ್ಲೇಶ್ವರ ನಗರ, ಚಳ್ಳಕೆರೆ. ಚಿತ್ರದುರ್ಗ ಜಿ.

ವಿರುದ್ಧ

ಎದುರುದಾರರು : ಪೌರಾಯುಕ್ತರು, ಜನನ ಮರಣ ನೋಂದಣಾಧಿಕಾರಿಗಳವರು, ನಗರಸಭೆ ಕಛೇರಿ, ಚಳ್ಳಕೆರೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನಸನ್ನಿಧಿಯ ನ್ಯಾಯಾಲಯದಲ್ಲಿ **1 ರಿಂದ 4 ನೇ ಅರ್ಜಿದಾರರ ತಾತನಾದ 5ನೇ ಅರ್ಜಿದಾರರ ಗಂಡನಾದ, ಮೃತ ಸಿದ್ದರಾಮಪ್ಪ ಬಿನ್ ಗುರುಸಿದ್ದಪ್ಪ ಇವರು ದಿನಾಂಕ 12-03-2011 ರಂದು ಚಳ್ಳಕೆರೆ ಟೌನ್ ಸೂಜಿಮಲ್ಲೇಶ್ವರ ನಗರದಲ್ಲಿರುವ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ** ಇವರು, ಮರಣ ಹೊಂದಿದ ಬಗ್ಗೆ ಮರಣದ ಸಮರ್ಥನಾ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರನ್ನು ಹೊರತುಪಡಿಸಿ ಇನ್ನು ಯಾರೇ ಅಗಲಿ ಮೃತರ ವಾರಸುದಾರರು ಇದ್ದಲ್ಲಿ **ದಿ : 25-10-2024** ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕವಾಗಲಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಗೈರು ಹಾಜರಾದಲ್ಲಿ ಏಕಪಕ್ಷೀಯವಾಗಿ ಈ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ 19-9-2024

ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ
ದಿನಾಂಕ : 19-09-2024 ಸಹಿ.
ಸ್ಥಳ : ಚಳ್ಳಕೆರೆ.
ಸಹಿ.
ಜಿ.ಓ.ಸುಮಲತ
ಅರ್ಜಿದಾರರ ಪರ ವಕೀಲರು, ಚಳ್ಳಕೆರೆ.
ಶಿರಸ್ತೆದಾರರು, ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಚಳ್ಳಕೆರೆ.

ಚಳ್ಳಕೆರೆ ಅಪರ ಸಿವಿಲ್ ನ್ಯಾಯಾಧೀಶರವರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ.

ಸಿ.ಆರ್.ಮಿಸ್. ನಂ. 529/2024

ಅರ್ಜಿದಾರರು : 1) ಶ್ಯಾಮಲಮ್ಮ ಕೋಂ ಲೇಟ್ ಶಂಕರಮೂರ್ತಿ ಸು. 45 ವರ್ಷ, 2) ಕಾಟಮ್ಮ ಕೋಂ ಲೇಟ್ ಸಣ್ಣಬೋರಯ್ಯ, ಸು. 60 ವರ್ಷ, 3) ಬೋಸಯ್ಯ ಬಿನ್ ಲೇಟ್ ಎತ್ತಿನ ಓಬಯ್ಯ, ಸು. 62 ವರ್ಷ, 4) ಓಬಯ್ಯ ಬಿನ್ ಲೇಟ್ ಎತ್ತಿನ ಓಬಯ್ಯ ಸು. 59 ವರ್ಷ, 5) ಬೋರಮ್ಮ ಬಿನ್ ಲೇಟ್ ಎತ್ತಿನ ಓಬಯ್ಯ ಕೋಂ ಪೂಜಾರಿ ಓಬಯ್ಯ,ಸು 62 ವರ್ಷ, ಅರ್ಜಿದಾರರ ವಾಸ ರಾಮದುರ್ಗ ಗ್ರಾಮ, ನಾಯಕನಹಟ್ಟಿ ಹೋ. ಚಳ್ಳಕೆರೆ ತಾ. ಚಿತ್ರದುರ್ಗ ಜಿಲ್ಲೆ

ವಿರುದ್ಧ

ಎದುರುದಾರರು : ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳವರು, ತಾಲ್ಲೂಕು ಕಛೇರಿ, ಚಳ್ಳಕೆರೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನಸನ್ನಿಧಿಯ ನ್ಯಾಯಾಲಯದಲ್ಲಿ **1 ಮತ್ತು 2ನೇ ಅರ್ಜಿದಾರರ ಮಾವನಾದ ಹಾಗೂ 3 ರಿಂದ 5ನೇ ಅರ್ಜಿದಾರರ ತಂದೆಯಾದ ಮೃತ ಎತ್ತಿನ ಓಬಯ್ಯ ಬಿನ್ ಲೇಟ್ ಕಾರೇ ಬೋರಯ್ಯ ಇವರು ದಿನಾಂಕ 16-02-2000 ರಂದು ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಹೋ. ರಾಮದುರ್ಗ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ** ಇವರು, ಮರಣ ಹೊಂದಿದ ಬಗ್ಗೆ ಮರಣದ ಸಮರ್ಥನಾ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರನ್ನು ಹೊರತುಪಡಿಸಿ ಇನ್ನು ಯಾರೇ ಅಗಲಿ ಮೃತರ ವಾರಸುದಾರರು ಇದ್ದಲ್ಲಿ **ದಿ : 09-10-2024** ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕವಾಗಲಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಗೈರು ಹಾಜರಾದಲ್ಲಿ ಏಕಪಕ್ಷೀಯವಾಗಿ ಈ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ 03-09-2024

ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ
ದಿನಾಂಕ : 03-09-2024 ಸಹಿ.
ಸ್ಥಳ : ಚಳ್ಳಕೆರೆ.
ಸಹಿ.
ಬಿ.ಪಾಲಯ್ಯ
ಅರ್ಜಿದಾರರ ಪರ ವಕೀಲರು, ಚಳ್ಳಕೆರೆ.
ಶಿರಸ್ತೆದಾರರು, ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಚಳ್ಳಕೆರೆ.

Udayakala printed and published by **K.N.Puttalingaiah** on behalf of **Anikethana Publication and Printers** and Printed at M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, SHIMOGA- 577 201 **Editor: K N Puttalingaiah** (Responsible for all the news printed). All rights reserved. Reproduction in whole or in part without written permission is prohibited.RNI REG NO. 71090/97.Volume:**2** Issue: **202**